**ದಿನಾಂಕಃ 21-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಸಂಖ್ಯೆಃ 6 ರಿಂದ 12ರವರ ಪರ ಶ್ರೀ. ಕೆ ಟಿ ಟಿ ವಕೀಲರಿಂದಃ-**

1. ದಾವೆ ಹೂಡಲು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳನ್ನು ಯಾರು ಸಂಬಂಧಪಟ್ಟ ಇಲಾಖೆಯಿಂದ ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿ ನಾನೇ ಎಂದು ನುಡಿಯುತ್ತಾರೆ. ದಾವಾ ಆಸ್ತಿಗೆ ಸಂಬಂಧಿಸಿದ ಇಸಿ ದಾಖಲೆಯನ್ನು ಉಪ ನೊಂದಣಿ ಕಛೇರಿಯಿಂದ ಪಡೆದುಕೊಂಡಿರುತ್ತೀರಾ ಎಂದರೆ ಇಲ್ಲ ಎನ್ನುತ್ತಾರೆ. ನನ್ನ ತಾಯಿ ಪುಟ್ಟಮ್ಮ ಮತ್ತು ಅವರ ಸಹೋದರಿ ತಿಮ್ಮಮ್ಮ ಬದುಕಿದ್ದಾಗ ದಾವಾ ಆಸ್ತಿಯಲ್ಲಿ ಭಾಗ ಬೇಕೆಂದು ದಾವೆ ಏನಾದರೂ ಮಾಡಿದ್ದರ ಎಂದರೆ ಇಲ್ಲ ಎನ್ನುತ್ತಾರೆ. ದಾವಾ ಆಸ್ತಿ ತಮ್ಮ ತಾತನ ಪಿತ್ರಾರ್ಜಿತನ ಆಸ್ತಿ ಎಂದು ಯಾವ ಆಧಾರದ ಮೇಲೆ ಹೇಳುತ್ತೀರ ಎಂದರೆ ಸಾಕ್ಷಿ ದಾಖಲೆಯ ಆಧಾರದ ಮೇಲೆ ಎನ್ನುತ್ತಾರೆ. ದಾವಾ ಆಸ್ತಿ ನನ್ನ ತಾತ ಕರಿಯಯ್ಯನ ಪಿತ್ರಾರ್ಜಿತ ಆಸ್ತಿ ಅಲ್ಲ ಎಂದರೆ ಸರಿಯಲ್ಲ.

2. ಪ್ರತಿವಾದಿ 6 ರಿಂದ 12 ಇವರುಗಳು ಪ್ರತಿವಾದಿ 1 ಮತ್ತು ಅವರ ಮಗಳು ವಿನುತ ರವರ ವಿರುದ್ದ ದಾವೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಹೂಡಿದ ನಂತರ ಸದರಿ ಪ್ರತಿವಾದಿ 6 ರಿಂದ 12 ನ್ಯೂಸ್ ಪೇಪರ್ ನಲ್ಲಿ ಪ್ರಕಟಣೆ ಹೊರಡಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಾತ ಕರಿಯಯ್ಯ ಸಾಯುವ ಪೂರ್ವದಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಆತನ ಮಗಳು ಲಿಂಗಮ್ಮ ರವರ ಹೆಸರಿಗೆ ವಿಲ್ ಪತ್ರ ಬರೆದು ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಲ್ ನ್ನು ನನ್ನ ತಾಯಿಯಾಗಲಿ ಅಥವಾ ನನ್ನ ತಾಯಿಯ ಸಹೋದರಿ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ಸದರಿ ಲಿಂಗಮ್ಮರವರಿಂದ ದಾವಾ ಆಸ್ತಿಯು ಆತಳ ಮಗ 1ನೇ ಪ್ರತಿವಾದಿ ವೆಂಕಟರಮಣ ರವರ ಹೆಸರಿಗೆ ಖಾತೆ ಬದಲಾಗಿದೆ ಎಂದರೆ ಸರಿಯಲ್ಲ.

3. ಸದರಿ ವೆಂಕಟರಮಣ ದಾವಾ ಸರ್ವೇ ನಂಬರ್ ಆಸ್ತಿಯನ್ನು ಭೂ ಪರಿವರ್ತನೆ ಮಾಡಿಸಿ 22 ನಿವೇಶನಗಳು ಮಾಡಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ 22 ಸೈಟುಗಳ ಪೈಕಿ ಪ್ರತಿವಾದಿ 6 ರಿಂದ 12 ಮತ್ತು ಇನ್ನುಳಿದ ಶಿಕ್ಷಕರುಗಳು ಒಟ್ಟು 17 ನಿವೇಶನಗಳನ್ನು ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿ ದಾವಾ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಖರೀದಿ ಮಾಡಿದ್ದಾರೆ ಎನ್ನುತ್ತಾರೆ. ಪ್ರತಿವಾದಿ 6 ರಿಂದ 12 ರವರು ಮಾಡಿಕೊಂಡಿರುವ ಖರೀದಿ ಪತ್ರಗಳನ್ನು ನಾನಾಗಲಿ, 1ನೇ ಪ್ರತಿವಾದಿಯಾಗಲಿ ಪ್ರಶ್ನೆ ಮಾಡಿಲ್ಲ ಎಂದರೆ ಸರಿ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ